ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು
E-mail:commissioner.pue@gmail.com. * Ph. No.23361857, 23361858* Fax-23361852

ಸಂಖ್ಯೆ:ಪಪೂಶಿಇ/ಶೈಶಾ/ನ.ಅಂ./2017-18 ದಿನಾಂಕ: 30-08-2017

# ಸುತ್ತೋಲೆ

ವಿಷಯ:- ನಕಲಿ ಅಂಕ ಪಟ್ಟಿಯ ಕುರಿತಂತೆ ಎಚ್ಚರಿಕೆ ವಹಿಸುವ ಬಗ್ಗೆ.

*-*-*-*-*

ರಾಜ್ಯದಲ್ಲಿ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿಯ ನಕಲಿ ಅಂಕ ಪಟ್ಟಿಯ ಹಾವಳಿ ಇರುತ್ತದೆ. ಎಸ್ ಎಸ್ ಎಲ್ ಸಿ ಯ ಅಂಕ ಪಟ್ಟಿಯು ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ರಾಷ್ಟ್ರೀಯ ಮುಕ್ತ ಶಿಕ್ಷಣದ ಸಂಸ್ಥೆ (N.I.O.S) (NATIONAL INSTITUTE OF OPEN SCHOOL) ಹಾಗೂ ಇತರ ರಾಜ್ಯಗಳ ಅಧಿಕೃತ ಪರೀಕ್ಷಾ ಮಂಡಳಿಗಳ ಮೂಲಕ ಪಡೆದಿರಬೇಕು. ದ್ವಿತೀಯ ಪಿಯುಸಿ ಅಂಕ ಪಟ್ಟಿಯು ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆ, N.I.O.S. , ಹಾಗೂ ಇತರೆ ಅಧಿಕೃತ ಪರೀಕ್ಷಾ ಮಂಂಡಳಿಗಳ ಮೂಲಕ ಪಡೆದಿರಬೇಕು. C.O.B.S.E (COUNCIL OF BOARD OF SECONDARY EDUCATION) ಸಂಸ್ಥೆಯಡಿ ಅಧಿಕೃತ ಪರೀಕ್ಷಾ ಮಂಡಳಿಗಳ ಮೂಲಕ ಪಡೆದ ಪ್ರಮಾಣ ಪತ್ರಗಳನ್ನು ನೈಜವೆಂದು ಪರಿಗಣಿಸುವುದು ಅಧಿಕೃತ ಮಂಡಳಿಗಳ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನಕಲಿ ಅಂಕಪಟ್ಟಿಗಳಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ರಾಜ್ಯದ ಯಾವುದೇ ಪದವಿ ಪೂರ್ವ ಕಾಲೇಜುಗಳಿಗೆ ದಾಖಲಾತಿಯನ್ನು ಮಾಡಿಕೊಳ್ಳದಂತೆ ಈ ಮೂಲಕ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಿದೆ. ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಕುರಿತಂತೆ ಎಚ್ಚರಿಕೆ ವಹಿಸಲು ಸೂಚಿಸುವುದು ಒಂದು ವೇಳೆ ನಕಲಿ ಅಂಕ ಪಟ್ಟಿಗಳನ್ನು ಹೊಂದಿದ ವಿದ್ಯಾರ್ಥಿಗಳ ದಾಖಲಾತಿಯನ್ನು ಮಾಡಿಕೊಂಡಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಜವಾಬ್ದಾರರಾಗಿರುತ್ತಾರೆಂದು ಈ ಮೂಲಕ ತಿಳಿಸಿದೆ.

30/8/17

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು

ಪ್ರತಿಯನ್ನು

1. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ – ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರುಗಳಿಗೆ – ಜಿಲ್ಲಾ ಉಪನಿರ್ದೇಶಕರ ಮೂಲಕ
3. ಕಛೇರಿ ಪ್ರತಿ